<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**</u>

<u>**ಸಿ.ಸಿ. ಸಂಖ್ಯೆಃ 2842/2024**</u>

ಹೆಸರುಃ   ಅಪ್ಸರಾ ಬೇಗಂ   ಸಿ.ಡಬ್ಲ್ಯೂಃ   11

ವಯಸ್ಸುಃ  29 ವರ್ಷ   ಪಿ.ಡಬ್ಲ್ಯೂಃ   6

ಗಂಡಃ  ಷಫಿವುಲ್ಲ-

ಉದ್ಯೋಗಃ   ಅಬಕಾರಿ ಉಪ ನಿರೀಕ್ಷಕರು

ವಾಸ ಸ್ಥಳ   ಹೊನ್ನಾಳಿ

ಸಾಕ್ಷಿಗೆ ದಿನಾಂಕಃ 06.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಸಅಅರವರಿಂದ ಮುಖ್ಯ ವಿಚಾರಣೆ</u>

ದಿಃ 30.09.2023 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಉಪನಿರೀಕ್ಷಳಾಗಿ ಹೊನ್ನಾಳಿ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 11.06.2024 ರಂದು ಚಾಸಾ 10 ರವರಿಂದ ಪ್ರಕರಣದ ಕಡತವನ್ನು ಪಡೆದು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿಃ 24.06.2024 ರಂದು ಚಾಸಾ 8 ರವರಿಗೆ ಪ್ರಕರಣದಲ್ಲಿ ಜಪ್ತಾದ ದ್ವಿಚಕ್ರ ವಾಹನ ಸಂ. ಕೆಎ 17 ಇಎಲ್ 6824 ರ ಮಾಲೀಕತ್ವದ ವಿವರವನ್ನು ಕೇಳಿ ನಿವೇದನೆಯನ್ನು ನೀಡಿರುತ್ತೇನೆ. ಸದರಿ ದ್ವಿಚಕ್ರ ವಾಹನವು ಆರೋಪಿ ಹೆಸರಿನಲ್ಲಿರುವುದಾಗಿ ಕಂಡು ಬಂದಿರುತ್ತದೆ. ದಿಃ 24.06.2024 ರ ನಿವೇದನೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 7** ಎಂದು, ಸಾಕ್ಷಿ ಸಹಿಯನ್ನು **ನಿಪಿ 7(ಎ)** ಎಂದು ಗುರುತಿಸಲಾಯಿತು. ಸದರಿ ದ್ವಿಚಕ್ರ ವಾಹನದ ಬಿ ಎಕ್ಸ್ ಟ್ರಾಕ್ಟ್ ಪ್ರತಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 8** ಎಂದು ಸಾಕ್ಷಿ ಸಹಿಯನ್ನು **ನಿಪಿ 8(ಎ)** ಎಂದು ಗುರುತಿಸಲಾಯಿತು.

ದಿಃ 03.07.2024 ರಂದು ಚಾಸಾ 6 ರವರ ಮುಖಾಂತರ ಚಾಸಾ 7 ರವರಿಂದ ರಾಸಾಯನಿಕ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಚಾಸಾ 6 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಚಾಸಾ 7 ರವರಿಂದ ಸ್ವೀಕರಿಸಿಕೊಂಡ ರಾಸಾಯನಿಕ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 9** ಎಂದು ಸಾಕ್ಷಿ ಸಹಿಯನ್ನು **ನಿಪಿ 9(ಎ)** ಎಂದು ಗುರುತಿಸಲಾಯಿತು.

ದಿಃ 20.07.2024 ರಂದು ಆರೋಪಿಗೆ ವಿಚಾರಣೆಗೆ ಹಾಜರಾಗಲೆಂದು ನೋಟಿಸ್ ಜಾರಿ

ಮಾಡಿರುತ್ತೇನೆ. ನಂತರ ದಿಃ 22.07.2024 ರಂದು ಆರೋಪಿಯ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಸದರಿ ನೋಟಿಸನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ 10** ಎಂದು, ಸಾಕ್ಷಿ ಸಹಿಯನ್ನು **ನಿಪಿ 10(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 11** ಎಂದು ಸಾಕ್ಷಿ ಸಹಿಯನ್ನು **ನಿಪಿ 11(ಎ)** ಎಂದು ಗುರುತಿಸಲಾಯಿತು.

ದಿಃ 18.09.2024 ರಂದು ಪ್ರಕರಣದಲ್ಲಿ ಜಪ್ತು ಪಡಿಸಲಾದ ಮದ್ಯವು ಯಾವ ಸನ್ನದುದಾರರಿಗೆ ಸರಬರಾಜದ ಬಗ್ಗೆ ಮಾಹಿತಿ ನೀಡಲು ಕೆ ಎಸ್ ಬಿ ಸಿ ಎಲ್ ದಾವಣಗೆರೆ ರವರಿಗೆ ಪತ್ರವನ್ನು ಬರೆದಿರುತ್ತೇನೆ. ಅದರಂತೆ ಚಾಸಾ 9 ರವರು ಈ ಪ್ರಕಣದಲ್ಲಿ ಜಪ್ತುಪಡಿಸಲಾದ ಮದ್ಯವು ಡಿ ಆರ್ ದೀಪಕ್, ನವ ಭಾರತ್ ವೈನ್ಸ್, ಸಿ ಎಲ್-2 ಸನ್ನದು, ಕಬ್ಬಳ ಗ್ರಾಮ ,ಚನ್ನಗಿರಿ ತಾಲ್ಲೂಕು, ದಾವಣಗೆರೆ ರವರಿಗೆ ಸೇರಿರುವುದಾಗಿ ತಿಳಿಸಿರುತ್ತಾರೆ. ದಿಃ 18.09.2024 ರ ನಿವೇದನೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 12** ಎಂದು, ಸಾಕ್ಷಿ ಸಹಿಯನ್ನು **ನಿಪಿ 12(ಎ)** ಎಂದು ಗುರುತಿಸಲಾಯಿತು. ದಿಃ 18.09.2024 ರಂದು ಚಾಸಾ 9 ರವರು ಪತ್ರದ ಜೊತೆ ನೀಡಿರುವ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪತ್ರ ಮತ್ತು ವರದಿಯನ್ನು ಒಟ್ಟಾಗಿ **ನಿಪಿ 13** ಎಂದು, ಸಾಕ್ಷಿ ಸಹಿಯನ್ನು **ನಿಪಿ 13(ಎ)** ಎಂದು ಗುರುತಿಸಲಾಯಿತು.

ದಿಃ 19.09.2024 ರಂದು ಡಿ ಆರ್ ದೀಪಕ್, ನವಭಾರತ್ ವೈನ್ಸ್, ಸಿ ಎಲ್-2 ಸನ್ನದುದಾರರು, ಕಬ್ಬಳ ಗ್ರಾಮ, ಚನ್ನಗಿರಿ ರವರಿಗೆ ವಿಚಾರಣೆಗೆ ಹಾಜರಾಗಲು ನೋಟಿಸನ್ನು ನೀಡಿರುತ್ತೇನೆ. ದಿಃ 21.09.2024 ರಂದು ಡಿ ಆರ್ ದೀಪಕ್, ನವಭಾರತ್ ವೈನ್ಸ್, ಸಿ ಎಲ್-2 ಸನ್ನದುದಾರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿಃ 19.09.2024 ರ ನೋಟಿಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ 14** ಎಂದು, ಸಹಿಯನ್ನು **ನಿಪಿ 14(ಎ)** ಎಂದು ಗುರುತಿಸಲಾಯಿತು. ಡಿ ಆರ್ ದೀಪಕ್, ನವಭಾರತ್ ವೈನ್ಸ್, ಸಿ ಎಲ್-2 ಸನ್ನದುದಾರರ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ 15** ಎಂದು, ಸಾಕ್ಷಿ ಸಹಿಯನ್ನು **ನಿಪಿ 15(ಎ)** ಎಂದು ಗುರುತಿಸಲಾಯಿತು.

ದಿಃ 25.07.2024 ರಂದು ಚಾಸಾ 2 ಮತ್ತು 3, ಸಿಬ್ಬಂದಿಗಳಾದ ಚಾಸಾ 5 ಮತ್ತು 6 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ.

ದಿಃ 30.09.2024 ಸೂಕ್ತ ಸಾಕ್ಷ್ಯದಾರಗಳು ದೊರೆತಿರುವುದರಿಂದ ಆರೋಪಿಯ ವಿರುದ್ದ

ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ಹಾಗೂ ಮು ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ಹಾಗೂ ಮು ಮಾ1ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ಎಸ್ ಜಿ ವಕೀಲರಿಂದಃ</u>**

ಚಾಸಾ 8 ಮತ್ತು 9 ರವರಿಂದ ನಾನು ಯಾವುದೇ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರಾಸಾಯನಿಕ ವರದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ನೋಟಿಸನ್ನು ನೀಡಿ ಅವರಿಂದ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುಮಾಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಆರೊಪ ಸಾಬಿತಾಗದೇ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೆ ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**